Grant of Loan to each Taluk Board under the Grant of Loan for Housing Schemes.

*Q.—412. Sri S. V. RAME GOWDA (Malur).—

Will the Government be pleased to state:—

(a) whether it is a fact that a sum of rupees one lakh has been provided for each year to each Taluk Board, under the grant of loan for Housing Schemes;

(b) whether it is a fact that individal loans of Rs. 500 to Rs. 2,000 at the rate of 3 per cent interest will be given to the Back ward Classes on instalment basis for 15 years on the security of their sites?

A.—Sri RAMAKRISHNA HEGDE (Minister for Co-operation and Development).—

(a) No.

(b) Under the Rural Housing Projects Scheme loan up to 66 2/3 per-cent of the total cost of the construction not exceeding Rs. 2,000 is admissible to each individual provided he holds a house site or has taken it on lease from Government for not less than 20 years. The loan is repayable in 20 instalments and bears interest at 5 per cent. In the case of Scheduled Castes and Scheduled Tribes, they are eligible for a subsidy of Rs. 400 and Rs. 800 respectively from the Social Welfare Budget in addition to the loan of Rs. 2,000 under the Rural Housing Projects Scheme.

ಶ್ರೀ ಎಸ್. ವಿ. ರಾಮೇಗೌಡ.—ಬಡವರಿಗೆ ಮನೆಗಳಿಗಾಗಿ ಈಗ ಕೊಡುತ್ತಿರುವ ಹಣವನ್ನು ತಾಲ್ಲೂಕ್ ಬೋರ್ಡುಗಳಿಗೆ ಕೊಡುವುದರಲ್ಲಿ ಸರ್ಕಾರಕ್ಕೇನು ತೊಂದರೆಯಿದೆ?

Mr. SPEAKER.—The Hon. Member wants to know whether it has not been entrusted to Taluk Boards.

†Sri RAMAKRISHNA HEGDE.—The scheme will be prepared by the Taluk Boards. Funds are entrusted to the respective societies which have been constituted for the purpose.

ಶ್ರೀ ಎಸ್. ವಿ. ರಾಮೇಗೌಡ.—ಈಗ ಎಲ್ಲಾ ಕಡೆಗಳಲ್ಲೂ ಸೊಸೈಟಿ ಆಗಿದೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಸೊಸೈಟಿ ಮಾಡಿಕೊಂಡು ಹಣ ಬೇಕೆಂದು ಕೇಳುವ ಕಡೆಗೆ ಕೊಡುತ್ತೇವೆ.

ಶ್ರೀ ಕೆ. ಎ. ಬೈಕೇಗೌಡ.—ಖಾಸಗಿಯವರಿಗೆ ಗೃಹ ನಿರ್ಮಾಣಕ್ಕಾಗಿ ಸಾಲ ಕೊಡುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಖಾಸಗಿಯವರಿಗೂ ಕೊಡುತ್ತಾರೆ. ಕೊಡುವಾಗ ಎರಡು ಮೂರು ಶ್ರೇಷ್ಠವಾದ ಅಂತಗಳನ್ನು ಗಮನಿಸುತ್ತಾರೆ ಬೆಂಕೆ ಅಪಘಾತವಾಗಿರುವ ಹಳ್ಳಿ, ಬಹಳ ಕಂಜೆಷ್ಟೆ ಇರುವ ಹಳ್ಳಿ, ಮೂರನೆಯದಾಗಿ ಹೆಚ್ಚು ಹಿಂದುಳಿದವರಿರುವ ಪ್ರದೇಶ-ಇವುಗಳನ್ನು ಆರಿಸಿ ಪ್ರಯಾರಿಟಿ ಕೊಡುತ್ತಾರೆ.

ಶ್ರೀ ಎಸ್. ವಿ. ರಾಮೇಗೌಡ.—ತಮ್ಮ ಅಧಿಕಾರಿಗಳು ಆರೀತಿ ಕೊಡದೆ ಎಲ್ಲ ಹೌಸಿಂಗ್ ಸೆರ್‌ಗಳ ಪೈಕೋ ಅಲ್ಲಿಗೆ ಮಾತ್ರ, ಆ ಸ್ಕೀಮಿನ ಕೆಳಗೆ ಬಂದರೆ ಮಾತ್ರ ಕೊಡುತ್ತಾರೆ, ಬಾಕಿ ಕಡೆ ಕೊಡುವುದಿಲ್ಲ ವೆಂಬುದ ತಮ್ಮ ಗಮನಕ್ಕೆ ಬಂದಿವೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹಾಗಿಲ್ಲ; ಹೌಸಿಂಗ್ ಸೆರ್ ಅನ್ನುವುದೇ ಬೇರೆ ಸ್ಕೀಮು. ರೂರರ್ ಹೌಸಿಂಗ್ ಅನ್ನುವುದೇ ಬೇರೆ ಸ್ಕೀಮು. ಎರಡೂ ಬೇರೆ ಬೇರೆ.

ಶ್ರೀಮತಿ ಚಂಪಾಬಾಯಿ ಭೋಗರೆ.—ಬೆಳಗಾಂ ಜಿಲ್ಲೆಯಲ್ಲಿ N.E.S. ಬ್ಲಾಕಿನಲ್ಲಿ ಮನೆಗಳನ್ನು ಕಟ್ಟುವವರಿಗೆ ೮೦೦ ರೂಪಾಯಿಗಳನ್ನು ಸಾಲವಾಗಿಯೂ, ೪೦೦ ರೂಪಾಯಿಗಳನ್ನು ಸಬ್ಸಿಡಿಯಾಗಿಯೂ ಕೊಡಬೇಕೆಂದು ಮಾಡಿದ್ದಾರೆ. ಇದುವರೆಗೂ ಈ ಸಬ್ಸಿಡಿ ನಮಗೆ ದೊರೆತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ನಮ್ಮ ಗಮನಕ್ಕೆ ಬಂದಿಲ್ಲ. ಗವರ್ನಮೆಂಟಿನವರೆ ಹಣ ಬರುವ ಹಾಗೆ ಮಾಡುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಗೃಹ ನಿರ್ಮಾಣದ ಬಗ್ಗೆ ಗ್ರಾಮಾಂತರ ಪ್ರದೇಶದಲ್ಲಿ ಈಗ ಎಷ್ಟು ಸೆಲ್ಲುಗಳಿವೆ? ಆ ಸೆಲ್ಲುಗಳಿಗೆ ಎಷ್ಟು ಹಣ ಒದಗಿಸಿದ್ದೀರಿ? ಗ್ರಾಮಾಂತರ ಸೊಸೈಟಿಗಳಿಂದ ಏಳು ಲಕ್ಷ ರೂಪಾಯಿಗಳು ಬೇಕೆಂದು ಕೋರಿ ಬಂದಿರತಕ್ಕ ಅರ್ಜಿಗಳು ಈ ಹೊತ್ತಿನವರೆಗೂ pending ನಲ್ಲಿರುವುದಕ್ಕೆ ಕಾರಣವೇನು?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಸ್ಕೀಮು ೧೯೫೮ನೆಯ ಇಸವಿಯಲ್ಲಿ ಪ್ರಾರಂಭವಾಯಿತು. ೧೯೫೮-೫೯ರಲ್ಲಿ ೮೮೪, ೧೯೫೯-೬೦ರಲ್ಲಿ ೧,೮೮೫, ೧೯೬೦ ೬೧ರಲ್ಲಿ ೨,೮೧೧ ಮತ್ತು ೧೯೬೧-೬೨ರಲ್ಲಿ ೯೯೭ ಮನೆಗಳು ಇದರಿಂದ ರಚನೆಯಾಗಿವೆ.

ಶ್ರೀಮತಿ ಚಂಪಾಬಾಯಿ ಭೋಗರೆ.—೧೯೬೨ನೆಯ ಇಸವಿಯಲ್ಲಿ ಬೆಳಗಾಂ ಜಿಲ್ಲೆಯಲ್ಲಿ ೮೦೦ ರೂಪಾಯಿಗಳನ್ನು ಮನೆ ಕಟ್ಟುವವರಿಗೆ ಸಾಲವಾಗಿ ಕೊಟ್ಟಿದ್ದಾರೆ. ಈ ಹಣ ಸಾಲದು, ಸಬ್ಸಿಡಿ ಹಣವನ್ನು ಬೇಗ ಕೊಡಬೇಕೆಂದು ಅಲ್ಲಿನ ಕಲೆಕ್ಟರ್‌ರವರು ಸರ್ಕಾರಕ್ಕೆ ಬರೆದಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ವಿ. ರಾಮೇಗೌಡ.—ಈ ಸೊಸೆಟಿಗಳಿಂದ ಆದಿಕರ್ಣಾಟಕರಿಗೂ ಮತ್ತು ಹಿಂದುಳಿದ ಪಂಗಡದವರಿಗೂ ಮನೆಕಟ್ಟುವುದಕ್ಕೆ ದುಡ್ಡು ಸರಿಯಾಗಿ ಸಿಕ್ಕುತ್ತಿಲ್ಲ. ಆದ್ದರಿಂದ ಈ ಹಣವನ್ನು ತಾಲ್ಲೂಕು ಬೋರ್ಡಿಗೆ ವಹಿಸುವುದು ಸರ್ಕಾರದ ಗಮನದಲ್ಲಿ ದೆಯೇ?